ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 31-12-1992.

# *ಸಫಲತೆಯನ್ನು ಪ್ರಾಪ್ತಿ ಮಾಡಿಕೊಳ್ಳಲು ಸಹಜ ಸಾಧನ - ಎಲ್ಲವನ್ನೂ ಸಫಲ ಮಾಡಿಕೊಳ್ಳುವುದಾಗಿದೆ*

(सफलता प्राप्त करने का साधन-सब-कुछ सफल करो)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ತಮ್ಮ ಸರ್ವ ಖಜಾನೆಗಳನ್ನು ಸಫಲ ಮಾಡಿಕೊಳ್ಳುವ ಸಂಲಗ್ನತೆಯಲ್ಲಿ ನಿಮಗ್ನವಾಗಿರುವ ಮಕ್ಕಳೊಂದಿಗೆ ನವಜೀವನದಾತ ಬಾಪ್‌ದಾದಾ ಮಾತನಾಡುತ್ತಿದ್ದಾರೆ.**

ಇಂದು ನವಜೀವನವನ್ನು ನೀಡುವಂತಹ ರಚಯಿತ ತಂದೆ ತಮ್ಮ ನವಜೀವನವನ್ನು ತಯಾರು ಮಾಡಿಕೊಳ್ಳುವಂತಹ ಮಕ್ಕಳನ್ನು ನೋಡುತ್ತಿದ್ದಾರೆ. ಈ ನವಜೀವನ ಅರ್ಥಾತ್ ಶ್ರೇಷ್ಠ ಬ್ರಾಹ್ಮಣ ಜೀವನ ನವಯುಗವನ್ನು ರಚನೆ ಮಾಡುವ ಸಲುವಾಗಿಯೇ ಇದೆ. ಅಂದಾಗ ಪ್ರತೀಯೊಂದು ಬ್ರಾಹ್ಮಣ ಅತ್ಮನ ಹೊಸಜೀವನ ಹೊಸಯುಗಕ್ಕಾಗಿಯೇ ಇರುವುದು. ಇದರಲ್ಲಿ ಎಲ್ಲವೂ ಹೊಸದೇ ಹೊಸದು. ಪ್ರಕೃತಿಯೂ ಸಹ ಸತೋಪ್ರಧಾನ ಅರ್ಥಾತ್ ಹೊಸದು.

ಪ್ರಪಂಚದ ಲೆಕ್ಕದಲ್ಲಿಹೊಸವರ್ಷವನ್ನು ಆಚರಣೆ ಮಾಡುತ್ತಾರೆ-ಹೊಸ ವರ್ಷದ ಶುಭಾಷಯಗಳನ್ನು ಕೊಡುತ್ತಾರೆ ಅಥವಾ ಒಬ್ಬರಿಗೊಬ್ಬರು ಹೊಸ ವರ್ಷದ ಗುರುತಾಗಿ ಉಡುಗೊರೆಯನ್ನೂ ಸಹ ಕೊಡುತ್ತಾರೆ. ಆದರೆ ತಂದೆಯು ನಿಮಗೆ ಹೊಸಯುಗದ ಶುಭಾಶಯಗಳನ್ನು ಕೊಡುತ್ತಿದ್ದಾರೆ. ಈಗ ನವಯುಗ ಅರ್ಥಾತ್ ಸ್ವರ್ಣಿಮ ಜಗತ್ತು ಸತ್ಯಯುಗ(ಸ್ವರ್ಗ) ಬಂದೇಬಿಟ್ಟಿತು ಎಂದು ಎಲ್ಲಾ ಆತ್ಮರಿಗೆ ಖುಷಿಯ ಸಂದೇಶವನ್ನು ತಿಳಿಸುತ್ತೀರಿ. ಇದೇ ಸೇವೆಯನ್ನು ಮಾಡುತ್ತೀರಲ್ಲವೇ. ಇದೇ ಖುಷಿಯ ಸಮಾಚಾರವನ್ನು ನೀಡುತ್ತೀರಲ್ಲವೇ. ಹೊಸಯುಗದ, ಚಿನ್ನದ ಉಡುಗೊರೆಯನ್ನು ನೀಡುತ್ತಿರಿ. ಯಾವ ಉಡುಗೊರೆಯನ್ನು ಕೊಡುತ್ತೀರಿ? ಜನ್ಮ-ಜನ್ಮಾಂತರದ ಅನೇಕ ಜನ್ಮಗಳಿಗಾಗಿ ವಿಶ್ವದ ರಾಜ್ಯಭಾಗ್ಯವನ್ನು ಕೊಡುತ್ತೀರಿ. ಈ ಸುವರ್ಣ ಉಡುಗೊರೆಯಲ್ಲಿ ಎಲ್ಲಾ ಪ್ರಕಾರದ ಉಡುಗೊರೆ ಬಂದೇಬಿಡುತ್ತದೆ. ಒಂದುವೇಳೆ ಈಗಿನ ಪ್ರಪಂಚದಲ್ಲಿ ಯಾರು ಎಷ್ಟೇ ದೊಡ್ಡ-ದೊಡ್ಡ ಅಥವಾ ಬಹಳ ಸುಂದರವಾದಂತಹ ಉಡುಗೊರೆಯನ್ನು ಕೊಡಲಿ ಆದರೂ ಏನನ್ನು ಕೊಡುತ್ತಾರೆ? ಈಗಿನಕಾಲದ ಕಿರೀಟ ಅಥವಾ ಸಿಂಹಾಸನವನ್ನೇ ಕೊಡಲಿ ಅದೂ ಸಹ ತಮ್ಮ ಸತೋಪ್ರಧಾನ ಸ್ವರ್ಣಿಮ ಉಡುಗೊರೆಯ ಮುಂದೆ ಏನಾಗಿದೆ? ಇದು ಯಾವ ದೊಡ್ಡ ಮಾತಾಗಿದೆ?

ನವಜೀವನ ರಚಯಿತ ತಂದೆ ತಾವೆಲ್ಲಾ ಮಕ್ಕಳಿಗೆ ಈ ಅಮೂಲ್ಯ, ಅವಿನಾಶಿ ಉಡುಗೊರೆಯನ್ನು ಕೊಟ್ಟುಬಿಟ್ಟಿದ್ದಾರೆ. ಅಧಿಕಾರಿಗಳಾದಿರಲ್ಲವೇ. ಬ್ರಾಹ್ಮಣ ಆತ್ಮರು ಸದಾ ಅಪಾರ ನಿಶ್ಚಯದ. ನಶೆಯಿಂದ ಏನು ಹೇಳುತ್ತೀರಿ? ವಿಶ್ವದ ರಾಜ್ಯಭಾಗ್ಯ ನಮ್ಮ ಜನ್ಮ ಸಿದ್ಧ ಅಧಿಕಾರವಾಗಿದೆ ಎಂದು ಹೇಳುತ್ತೀರಿ. ಇಷ್ಟೊಂದು ನಶೆಯಿದೆಯಲ್ಲವೇ. ಇದು ಕೆಲವೊಮ್ಮೆ ಕಡಿಮೆ. ಕೆಲವೊಮ್ಮೆ ಹೆಚ್ಚಾಗುತ್ತದೆಯೇ? "ನಿಶ್ಚಯ ಇದೆ ಮತ್ತು ನಿಶ್ಚಿತವಾಗಿದೆ". ಈ ಅಧಿಕಾರವನ್ನು ಯಾರೂ ಬದಲಾವಣೆ ಮಾಡಲು ಸಾಧ್ಯವಿಲ್ಲ. ನಿಶ್ಚಯಬುದ್ಧಿ ಆತ್ಮರಿಗೆ ಇದು ಪೂರ್ವ ನಿಶ್ಚಿತವಾದದ್ದು. ಅಥವಾ ಸಿಗುತ್ತದೋ ಇಲ್ಲವೋ ಎನ್ನುವ ಚಿಂತೆಯಿದೆಯೇ ಎಂದಾದರೂ ಈ ರೀತಿಯ ಸಂಕಲ್ಪ ಬರುತ್ತದೆಯೇ? ಒಂದು ವೇಳೆ ಬ್ರಾಹ್ಮಣರಾದರೆ ನಿಶ್ಚಿತವಾಗಿಯೂ ಬ್ರಾಹ್ಮಣರಿಂದ ಸೂಕ್ಷ್ಮ ದೇವತೆ. ಸೂಕ್ಷ್ಮ ದೇವತೆಯಿಂದ ದೇವತೆ. ಪಕ್ಕಾ ನಿಶ್ಚಯವಿದೆಯಲ್ಲವೇ, ಅಥವಾ ಸ್ವಲ್ಪ ಏರು-ಪೇರಾಗುತ್ತದೆಯೇ? ಅಚಲ- ಅಟಲವಾಗಿದೆಯೇ? ಈ ರೀತಿ ಸುವರ್ಣ ಉಡುಗೊರೆಯನ್ನು ತಂದೆ ತಮಗೆಗೆ ಕೊಟ್ಟಿದ್ದಾರೆ ಮತ್ತು ಅದನ್ನು ತಾವು ಏನು ಮಾಡುತ್ತೀರಿ? ಅನ್ಯರಿಗೆ ಕೊಡುತ್ತೀರಿ. ಅಲ್ಪಕಾಲದ ಉಡುಗೊರೆಯಾದರೆ ಅಲ್ಪಕಾಲ ಸಮಾಪ್ತಿಯಾದ ಮೇಲೆ ಉಡುಗೊರೆಯೂ ಸಮಾಪ್ತಿಯಾಗಿಬಿಡುತ್ತದೆ ಆದರೆ ಇದು ಅವಿನಾಶಿಯಾದ ಉಡುಗೊರೆ. ಪ್ರತಿ ಜನ್ಮದಲ್ಲಿ ತಮ್ಮ ಜೊತೆ ಇರುತ್ತದೆ.

ವಾಸ್ತವಿಕವಾಗಿ ಆಚರಿಸುವುದೆಂದರೆ ನವಯುಗದಲ್ಲಿ ಆಚರಿಸುವುದು ಮತ್ತು ಈ ಸಂಗಮಯುಗದಲ್ಲಿ ಪ್ರತಿದಿನ ಆಚರಿಸುವುದು, ಪ್ರತಿದಿನ ಖುಷಿಯಲ್ಲಿ ಇರುವುದಾಗಿದೆ. ಪ್ರತಿದಿನ ಖುಷಿಯ ಉಯ್ಯಾಲೆಯಲ್ಲಿ ತೂಗುವುದಾಗಿದೆ ಅಥವಾ ಖುಷಿಯಲ್ಲಿ ನರ್ತನೆ(ನಾಟ್ಯ) ಮಾಡುವುದಾಗಿದೆ. ಅವಿನಾಶಿ ಹಾಡನ್ನು ಹಾಡುವುದಾಗಿದೆ. ಆದ್ದರಿಂದ ಬ್ರಾಹ್ಮಣಜೀವನದ ಪ್ರತಿದಿನ ಆಚರಣೆಯನ್ನು ಮಾಡುತ್ತಿರುತ್ತೀರಿ. ಪ್ರತಿದಿನ ಬ್ರಾಹ್ಮಣರಿಗೆ ಉತ್ಸಾಹ ಮತ್ತು ಒಲವನ್ನು ಹೆಚ್ಚಿಸುವಂತಹ ಹಬ್ಬ-ಹರಿದಿನವಾಗಿದೆ. ಆದ್ದರಿಂದ ಸ್ಮೃತಿಚಿಹ್ನೆಯ ರೂಪದಲ್ಲೂ ಸಹ ಭಾರತದಲ್ಲಿ ಅನೇಕ ಉತ್ಸವಗಳನ್ನು ಆಚರಿಸುತ್ತಿರುತ್ತಾರೆ-ಭಾರತದಲ್ಲಿ ವರ್ಷಪೂರ್ಣ ಎಲ್ಲಾ ದಿನವು ಆಚರಣೇಯ ದಿನ ಎಂದು ಪ್ರಸಿದ್ಧವಾಗಿದೆ. ಭಾರತದಲ್ಲಿ ಆಚರಣೆ ಮಾಡವಷ್ಟು

ಮತ್ತೆಲ್ಲೂ ಆಚರಣೆ ಮಾಡುವುದಿಲ್ಲ. ಇದು ಬ್ರಾಹ್ಮಣರಾದ ತಮ್ಮ ಪ್ರತಿಯೊಂದು ದಿನದ ಉತ್ಸವದ ಗುರುತಾಗಿದೆ. ಆದ್ದರಿಂದ ಹೊಸವರ್ಷದ ದಿನವನ್ನು ಆಚರಿಸುತ್ತಿದ್ದೀರಿ. ಹೊಸವರ್ಷವನ್ನು ಆಚರಿಸಲು ಬಂದಿದ್ದೀರಿ. ಕೇವಲ- ಒಂದು ದಿನವಷ್ಟೇ ಆಚರಿಸುತ್ತೀರಾ? ಮೊದಲನೆಯ ತಾರೀಖು ಸಮಾಪ್ತಿ ಆದ ನಂತರ ಆಚರಿಸುವುದೂ ಸಹ ಸಮಾಪ್ತಿಯಾಗುತ್ತದೆಯೇ? ತಾವು ಶ್ರೇಷ್ಠ ಆತ್ಮರ ಹೊಸ ಜನ್ಮ ಅರ್ಥಾತ್ ಈ ಬ್ರಾಹ್ಮಣ ಜನ್ಮದ ಶ್ರೇಷ್ಠ ರಾಶಿಯಾಗಿದೆ ಪ್ರತಿದಿನ ಆಚರಿಸುವುದು, ಪ್ರತಿದಿನ ಹಬ್ಬದದಿನ. ತಮ್ಮ ಜನ್ಮಪತ್ರಿಯಲ್ಲೂ ಸಹ ಬರೆಯಲ್ಪಟ್ಟಿದೆ ಪ್ರತಿದಿನ ಸದಾ ಶ್ರೇಷ್ಠವಾದ ದಿನವಾಗಲಿದೆ. ತಾವು ಬ್ರಾಹ್ಮಣರದು ಶ್ರೇಷ್ಠರಾಶಿಯಾಗಿದೆ ಸದಾ ಹಾರುವಕಲೆಯಲ್ಲಿ ಇರುವುದು. ಎರಡುದಿನ 'ಬಹಳ ಚೆನ್ನಾಗಿರುವುದು ಮತ್ತೆ ನಂತರ ಸ್ವಲ್ಪ ವ್ಯತ್ಯಾಸ ಆಗುವುದು. ಈ ರೀತಿ ಅಲ್ಲ, ಮಂಗಳವಾರ ಚೆನ್ನಾಗಿರುತ್ತದೆ. ಗುರುವಾರ ಅದಕ್ಕಿಂತಲೂ ಚೆನ್ನಾಗಿರುತ್ತದೆ ಶುಕ್ರವಾರ ವಿಘ್ನ ಬಂದುಬಿಡುತ್ತದೆ. ಇಂತಹ ರಾಶಿ ತಮ್ಮದೇ? ಏನು ನಡೆಯುತ್ತಿದೆ ಅದು ಚೆನ್ನಾಗಿದೆ. ಏನು ನಡೆಯುವುದಿದೆ ಇನ್ನೂ ಒಳ್ಳೆಯದಿದೆ. ಇದನ್ನು ಬ್ರಾಹ್ಮಣರ ಹಾರುವಕಲೆಯ ರಾಶಿ ಎಂದು ಹೇಳಲಾಗುತ್ತದೆ. ಬ್ರಾಹ್ಮಣಜೀವನದ ರಾಶಿ ಬದಲಾಗಿದೆ ಏಕೆಂದರೆ ಜನ್ಮ ಹೊಸದಾಯಿತಲ್ಲವೇ. ಈ ವರ್ಷ ಪ್ರತಿದಿನ ತಮ್ಮ ಶ್ರೇಷ್ಠ ರಾಶಿಯನ್ನು ನೋಡಿ ಪ್ರತ್ಯಕ್ಷದಲ್ಲಿ ತರಬೇಕಾಗಿದೆ. ಪ್ರಪಂಚದವರ ಲೆಕ್ಕದಿಂದ ಈ ಹೊಸವರ್ಷದ ಮತ್ತು ತಾವು ಬ್ರಾಹ್ಮಣರ ಲೆಕ್ಕದಿಂದ ವಿಶೇಷ ಅವ್ಯಕ್ತ ವರ್ಷವನ್ನಾಗಿ ಆಚರಿಸುತ್ತಿದ್ದೀರಿ. ಹೊಸ ವರ್ಷ ಅರ್ಥಾತ್ ಅವ್ಯಕ್ತವರ್ಷದ ಆರಂಭವನ್ನು ಮಾಡುತ್ತಿದ್ದೀರಿ. ಅಂದಾಗ ಈ ಹೊಸವರ್ಷ ಅಥವಾ ಅವ್ಯಕ್ತವರ್ಷದ ವಿಶೇಷ ಸ್ಲೋಗನ್ ಸದಾ ಇದೇ ನೆನಪಿರಲಿ - ಸದಾ ಸಫಲತೆಯ ವಿಶೇಷ ಸಾಧನ ಪ್ರತಿಯೊಂದು ಸೆಕೆಂಡನ್ನು ಪ್ರತಿಯೊಂದು ಶ್ವಾಸವನ್ನು, ಪ್ರತಿಯೊಂದು ಖಜಾನೆಯನ್ನು ಸಫಲ ಮಾಡಿಕೊಳ್ಳಬೇಕಾಗಿದೆ. ಸಫಲ ಮಾಡುವುದೇ ಸಫಲತೆಯ ಆಧಾರವಾಗಿದೆ. ಯಾವುದೇ ಪ್ರಕಾರದ ಸಫಲತೆ ಸಂಕಲ್ಪದಲ್ಲಿ, ಮಾತಿನಲ್ಲಿ, ಕರ್ಮದಲ್ಲಿ, ಸಂಬಂಧ-ಸಂಪರ್ಕದಲ್ಲಿ, ಸರ್ವ ಪ್ರಕಾರದ ಸಫಲತೆಯನ್ನು ಅನುಭವ ಮಾಡಬಯಸಿದರೆ ಸಫಲ ಮಾಡಿಕೊಳ್ಳುತ್ತಾ ಹೋಗಿರಿ. ವ್ಯರ್ಥವಾಗಿ ಹೋಗಬಾರದು. ಅದನ್ನು ಸ್ವಯಂನ ಪ್ರತಿ ಸಫಲ ಮಾಡಿಕೊಳ್ಳಿ. ಅಥವಾ ಆತ್ಮರ ಪ್ರತಿ ಸಫಲ ಮಾಡಿರಿ. ಆಗಲೇ ಸ್ವಾಭಾವಿಕವಾಗಿ ಸಫಲತೆಯ ಖುಷಿಯ ಅನುಭೂತಿಯನ್ನು ಮಾಡುತ್ತಿರುತ್ತೀರಿ ಏಕೆಂದರೆ ಸಫಲ ಮಾಡುವುದು ಅರ್ಥಾತ್ ವರ್ತಮಾನಕ್ಕಾಗಿ ಸಫಲತೆ ಮತ್ತು ಭವಿಷ್ಯಕ್ಕಾಗಿ ಜಮಾ ಮಾಡಿಕೊಳ್ಳುವುದು.

ಎಷ್ಟು ಈ ಜೀವನದಲ್ಲಿ ಸಮಯವನ್ನು ಸಫಲ ಮಾಡಿಕೊಳ್ಳುತ್ತೀರೋ ಅದರ ಫಲ ಸ್ವರೂಪವಾಗಿ ರಾಜ್ಯಭಾಗ್ಯದ ಸಂಪೂರ್ಣ ಸಮಯ ರಾಜ್ಯಾಧಿಕಾರಿಗಳಾಗುತ್ತೀರಿ. ಪ್ರತಿ ಶ್ವಾಸ ಸಫಲ ಮಾಡಿಕೊಂಡರೆ ಅದರ ಫಲ ಸ್ವರೂಪ ಅನೇಕ ಜನ್ಮ ಸದಾ ಆರೋಗ್ಯವಂತರಾಗಿರುತ್ತೀರಿ. ಕೆಲವೊಮ್ಮೆ ನಡೆಯುತ್ತಾ-ನಡೆಯುತ್ತಾ ಶ್ವಾಸ ನಿಂತುಹೋಗುವುದಿಲ್ಲ. ಹಾರ್ಟ್ ಫೇಲ್ ಆಗುವುದಿಲ್ಲ. ಒಂದುಗುಣಕ್ಕೆ ಸಾವಿರಗುಣ ಸಫಲತೆಯ ಅಧಿಕಾರ ಪ್ರಾಪ್ತಿ ಮಾಡಿಕೊಳ್ಳುತ್ತೀರಿ. ಈ ಪ್ರಕಾರದಿಂದ ಸರ್ವ ಖಜಾನೆಯನ್ನು ಸಫಲ ಮಾಡಿಕೊಳ್ಳುತ್ತಿರುತ್ತೀರಿ. ಇದರಲ್ಲೂ ಸಹ ವಿಶೇಷವಾಗಿ ಜ್ಞಾನದ ಖಜಾನೆಯನ್ನು ಸಫಲ ಮಾಡಿಕೊಳ್ಳುತ್ತೀರಿ. ಜ್ಞಾನ ಅರ್ಥಾತ್ ತಿಳುವಳಿಕೆ. ಇದರ ಫಲ ಸ್ವರೂಪವಾಗಿ ಭವಿಷ್ಯದಲ್ಲಿ ಅನೇಕ ಮಂತ್ರಿಗಳಿಂದ ಸಲಹೆಯನ್ನು ತೆಗೆದುಕೊಳ್ಳುವ ಅವಶ್ಯಕತೆ ಬರುವುದಿಲ್ಲ. ಅಂತಹ

ತಿಳುವಳಿಕೆವುಳ್ಳವರಾಗುತ್ತೀರಿ. ಸ್ವಯಂ ತಾವೇ ತಿಳುವಳಿಕೆವುಳ್ಳವರಾಗಿ ರಾಜ್ಯಭಾಗ್ಯವನ್ನು ನಡೆಸುತ್ತೀರಿ. ಮತ್ತೊಂದು ಖಜಾನೆ-ಸರ್ವಶಕ್ತಿಗಳ ಖಜಾನೆ. ಎಷ್ಟು ಸರ್ವಶಕ್ತಿಗಳ ಖಜಾನೆಯನ್ನು ಕಾರ್ಯದಲ್ಲಿ ತೊಡಗಿಸುತ್ತೀರೋ, ಸಫಲ ಮಾಡಿಕೊಳ್ಳುತ್ತೀರೋ ಅಷ್ಟು ತಮ್ಮ ಭವಿಷ್ಯ ರಾಜ್ಯದಲ್ಲಿ ಯಾವುದೇ ಶಕ್ತಿಯ ಕೊರತೆ ಇರುವುದಿಲ್ಲ. ಸರ್ವಶಕ್ತಿಗಳು ಸ್ವತಃವಾಗಿಯೇ ಅಖಂಡ, ಅಟಲ ನಿರ್ವಿಘ್ನ ಕಾರ್ಯದಲ್ಲಿ ಸಫಲತೆಯ ಅನುಭೂತಿಯನ್ನು ಮಾಡಿಸುತ್ತದೆ. ಯಾವುದೇ ಶಕ್ತಿಯ ಕೊರತೆ ಇರುವುದಿಲ್ಲ. ಧರ್ಮಶಕ್ತಿ ಮತ್ತು ರಾಜ್ಯಶಕ್ತಿ ಎರಡೂ ಒಟ್ಟಿಗೆ ನಡೆಯುತ್ತವೆ. ಮೂರನೆಯದು-ಸರ್ವಗುಣಗಳ ಖಜಾನೆ. ಅದರ ಫಲ ಸ್ವರೂಪವಾಗಿ ಈ ಕೊನೆಯ ಸಮಯದಲ್ಲೂ ಸಹ ನಿಮ್ಮ ಜಡ ಚಿತ್ರಗಳ ಗಾಯನ/ಮಹಿಮೆ "ಸರ್ವಗುಣ ಸಂಪನ್ನ ದೇವತಾ" ರೂಪದಲ್ಲಿ ಆಗುತ್ತಿದೆ. ಇಂತಹ ಗುಣಮೂರ್ತಿಗಳಾಗುತ್ತೀರಿ. ಈ ರೀತಿ ಪ್ರತಿಯೊಂದು ಖಜಾನೆಯ ಸಫಲತೆಯ ಫಲ ಸ್ವರೂಪವನ್ನು ಮನನ ಮಾಡಿ. ತಿಳಿಯಿತೇ? ಪರಸ್ಪರದಲ್ಲಿ ಆತ್ಮೀಯ ವಾರ್ತಾಲಾಪವನ್ನು ಮಾಡಿ. ಈ ಅವ್ಯಕ್ತವರ್ಷದಲ್ಲಿ ಸಫಲ ಮಾಡಿ ಮತ್ತು ಸಫಲತೆಯ ಅನುಭವವನ್ನು ಮಾಡುತ್ತಿರಬೇಕು.

ಈ ಅವ್ಯಕ್ತವರ್ಷ ವಿಶೇಷ ಬ್ರಹ್ಮಾತಂದೆಯ ಸ್ನೇಹದಲ್ಲಿ ಆಚರಿಸುತ್ತಿದ್ದೀರಿ. ಸ್ನೇಹದ ಗುರುತಾಗಿದೆ-ಯಾವುದು ಸ್ನೇಹಿಗೆ ಪ್ರಿಯವಾದದ್ದೋ ಅದೇ ಸ್ನೇಹ ಮಾಡುವಂತಹವರಿಗೂ ಸಹ ಪ್ರಿಯವಾಗುತ್ತದೆ. ಬ್ರಹ್ಮಾತಂದೆಯ ಸ್ನೇಹ ಯಾವುದರೊಂದಿಗೆ ಇತ್ತು? ಮುರಳಿಯೊಂದಿಗೆ. ಎಲ್ಲದಕ್ಕಿಂತ ಹೆಚ್ಚು ಪ್ರೀತಿ ಮುರಳಿಯೊಂದಿಗೆ ಇತ್ತಲ್ಲವೇ. ಆದ್ದರಿಂದ ಮುರಳಿಧರರಾದರು ಅಲ್ಲವೇ, ಭವಿಷ್ಯದಲ್ಲೂ ಅದ್ದರಿಂದಲೇ ಮುರಳಿಧರರಾದರು. ಮುರಳಿಯೊಂದಿಗೆ ಪ್ರೀತಿ ಇದ್ದರೆ ಭವಿಷ್ಯ ಶ್ರೀಕೃಷ್ಣನ ರೂಪದಲ್ಲೂ ಸಹ ಕೊಳಲನ್ನು (ಮುರಳಿ) ಗುರುತಾಗಿ ತೋರಿಸುತ್ತಾರೆ. ಅಂದಾಗ ಯಾವುದರೊಂದಿಗೆ ತಂದೆಯ ಪ್ರೀತಿ ಇತ್ತೋ ಅದರೊಂದಿಗೆ ಪ್ರೀತಿ ಇರಬೇಕು-ಇದು ಪ್ರೀತಿಯ ಗುರುತಾಗಿದೆ. ಕೇವಲ ಹೇಳುವವರಲ್ಲ-ಬ್ರಹ್ಮಾ ತಂದೆ ಬಹಳ ಪ್ರಿಯರಾಗಿದ್ದರು ಮತ್ತು ಈಗಲೂ ಇದ್ದಾರೆ. ಆದರೆ ಅದರ ಗುರುತೇನು? ಯಾರಿಗೆ ಬ್ರಹ್ಮಾ ತಂದೆಯ ಮೇಲೆ ಪ್ರೀತಿ ಇದೆ, ಈಗಲೂ ಇದೆ ಅವರ ಮೇಲೆ ಪ್ರೀತಿ ಸದಾ ಕಂಡುಬರಲಿ. ಆಗ ಅವರಿಗೆ ಬ್ರಹ್ಮಾತಂದೆಯ ಪ್ರಿಯರೆಂದು ಕರೆಯಲಾಗುತ್ತದೆ. ಇಲ್ಲವೆಂದರೆ ನಂಬರ್‌ವಾರ್ ಪ್ರಿಯರೆಂದು ಕರೆಯಲಾಗುತ್ತದೆ. ನಂಬರ್‌ವನ್ ಎಂದು ಹೇಳುವುದಿಲ್ಲ, ನಂಬರ್‌ವಾರ್ ಎಂದು ಹೇಳಲಾಗುತ್ತದೆ. ಅವ್ಯಕ್ತವರ್ಷದ ಲಕ್ಷ್ಯವಾಗಿದೆ, ತಂದೆಯ ಪ್ರೀತಿಯ ಗುರುತು ಪ್ರತ್ಯಕ್ಷ ಜೀವನದಲ್ಲಿ ತೋರಿಸಬೇಕು. ಇದೇ ಆಚರಿಸುವುದಾಗಿದೆ. ಇದನ್ನು ಮತ್ತೊಂದು ಶಬ್ದದಲ್ಲಿ ತಂದೆಯ ಸಮಾನ ಆಗುವುದು ಎಂದು ಹೇಳುತ್ತೀರಿ. ಯಾವುದೇ ಕರ್ಮವನ್ನು ಮಾಡಿ ವಿಶೇಷ ಅಂಡರ್‌ಲೈನ್ ಮಾಡಿ ಕರ್ಮಕ್ಕೆ ಮೊದಲೇ. ಮಾತಿಗೆ ಮೊದಲೇ, ಸಂಕಲ್ಪಕ್ಕೆ ಮೊದಲೇ ಪರಿಶೀಲನೆ ಮಾಡಿ. ಇದು ಬ್ರಹ್ಮಾತಂದೆಯ ಸಮಾನ ಪ್ರೀತಿಯ ಗುರುತಾಗಿದೆಯೇ? ನಂತರ ಸಂಕಲ್ಪವನ್ನು ಸ್ವರೂಪದಲ್ಲಿ ತನ್ನಿ, ಮಾತನ್ನು ಬಾಯಿಂದ ಹೇಳಿ, ಕರ್ಮವನ್ನು ಕರ್ಮೇಂದ್ರಿಯಗಳಿಂದ ಮಾಡಿ. ಮೊದಲು ಪರಿಶೀಲನೆ ಮಾಡಿ, ನಂತರ ಪ್ರತ್ಯಕ್ಷದಲ್ಲಿ ತನ್ನಿ. ಯೋಚನೆ ಮಾಡಿರಲಿಲ್ಲ ಆದರೆ ಆಗಿಬಿಟ್ಟಿತು. ಈ ರೀತಿ ಅಲ್ಲ. ಬ್ರಹ್ಮಾತಂದೆಯ ವಿಶೇಷತೆ ಇದಾಗಿದೆ-ಏನನ್ನು ಯೋಚನೆ ಮಾಡುತ್ತಿದ್ದರೋ ಅದನ್ನೇ ಮಾಡುತ್ತಾರೆ. ಏನನ್ನು ಹೇಳುತ್ತಾರೋ ಅದನ್ನೇ ಮಾಡುತ್ತಾರೆ. ಹೊಸ ಜ್ಞಾನವಾದ ಕಾರಣ ಎಷ್ಟೇ ವಿರೋಧಿಗಳು ವಿರೋಧ ಮಾಡಿದರೂ ಸಹ

ತಮ್ಮ ಸ್ವಮಾನದ ಸ್ಮೃತಿಯಿಂದ ತಂದೆಯ ಸಾಂಗತ್ಯದ ಸಮರ್ಥತೆಯಿಂದ ಮತ್ತು ದೃಢತೆ, ನಿಶ್ಚಯದ ಶಸ್ತ್ರಗಳಿಂದ, ಶಕ್ತಿಯಿಂದ ತನ್ನ ಸ್ಥಾನದಲ್ಲಿ ಸದಾ ಅಚಲ, ಅಟಲರಾಗಿದ್ದರು. ಎಲ್ಲಿ ಸ್ಥಾನ, ಮಾನವಿದೆಯೋ ಅಲ್ಲಿ ವಿರೋಧಿಗಳು ಏನು ಮಾಡುತ್ತಾರೆ? ವಿರೋಧ (ಅಪೋಸಿಷನ್), ಇದು ಸ್ಥಾನವನ್ನು (ಪೊಸೀಷನ್) ದೃಢ ಮಾಡುತ್ತದೆ. ಅಲುಗಾಡಿಸುವುದಿಲ್ಲ ಇನ್ನೂ ಭದ್ರ ಮಾಡುತ್ತದೆ. ಅದರೆ ವಿಜಯಿ ಆಗುವ ಪ್ರತ್ಯಕ್ಷ ಪ್ರಮಾಣ ಸ್ವಯಂ ತಾವಾಗಿದ್ದೀರಿ ಮತ್ತು ಜೊತೆ- ಜೊತೆಗೆ ನಾಲ್ಕಾರುಕಡೆಯ ಸೇವೆಯ ಪ್ರಮಾಣವಾಗಿದೆ. ಇದನ್ನೇ ಮೊದಲು ಹೇಳುತ್ತಿದ್ದರು ಇವರು ಹಾಳು (ಧಮಾಲ್) ಮಾಡುವವರೆಂದು ಹೇಳುತ್ತಿದ್ದರು ಆದರೆ ಈಗ ಅದ್ಭುತ ಮಾಡಿ ತೋರಿಸಿದ್ದಾರೆ ಎಂದು ಹೇಳುತ್ತಾರೆ. ಈಗ ಅದ್ಭುತ ಮಾಡಿ ತೋರಿಸಿದ್ದಾರೆಂದು ಹೇಳುತ್ತಾರೆ. ಅಂದಾಗ ಇದು ಹೇಗೆ ಆಯಿತು? ವಿರೋಧವನ್ನು ಶ್ರೇಷ್ಠ ಸ್ಥಾನದಲ್ಲಿ ಇಟ್ಟುಕೊಂಡು ಸಮಾಪ್ತಿ ಮಾಡಿದರು.

ಈ ವರ್ಷದಲ್ಲಿ ಏನು ಮಾಡುತ್ತೀರಿ? ಹೇಗೆ ಬ್ರಹ್ಮಾತಂದೆ ನಿಶ್ಚಯದ ಆಧಾರದ ಮೇಲೆ, ನಿಶ್ಚಿತವಾದ ಭವಿಷ್ಯವನ್ನು ತಿಳಿದು ಸೆಕೆಂಡಿನಲ್ಲಿ ತನ್ನದೆಲ್ಲವನ್ನು ಸಫಲ ಮಾಡಿಕೊಂಡರು. ತನಗಾಗಿ ಏನನ್ನೂ ಇಟ್ಟುಕೊಳ್ಳಲಿಲ್ಲ. ಸಫಲ ಮಾಡಿಕೊಂಡರು. ಅದರ ಪ್ರತ್ಯಕ್ಷಪ್ರಮಾಣ ನೋಡಿದಿರಿ ಅಂತಿಮ ದಿನದವರೆಗೂ ತನುವಿನಿಂದ ಪತ್ರವ್ಯವಹಾರದ ಮೂಲಕ ಸೇವೆಯನ್ನು ಮಾಡಿದರು ಮುಖದಿಂದ ಮಹಾವಾಕ್ಯವನ್ನು ಉಚ್ಚಾರಣೆ ಮಾಡಿದರು. ಅಂತಿಮ ದಿನವೂ ಸಹ ಸಮಯ, ಸಂಕಲ್ಪ, ಶರೀರವನ್ನು ಸಫಲ ಮಾಡಿಕೊಂಡರು. ಅಂದಾಗ ಸಫಲ ಮಾಡಿಕೊಳ್ಳುವುದು ಸ್ನೇಹದ ಗುರುತಾಗಿದೆ. ಶ್ರೇಷ್ಠತೆಯಲ್ಲಿ ತೊಡಗಿಸುವುದೇ ಸಫಲ ಮಾಡಿಕೊಳ್ಳುವುದಾಗಿದೆ. ಸಫಲತೆಯ ಲಕ್ಷ್ಯವನ್ನು ಇಟ್ಟಾಗ ಸ್ವತಃವಾಗಿಯೇ ವ್ಯರ್ಥ ಸಮಾಪ್ತಿಯಾಗಿಬಿಡುತ್ತದೆ. ಹೇಗೆ-ಬೆಳಕಿನ ಮುಂದೆ ಅಂಧಕಾರ ಸ್ವತಃವಾಗಿಯೇ ಸಮಾಪ್ತಿಯಾಗಿಬಿಡುತ್ತದೆಯೋ ಅಂಧಕಾರವನ್ನು ಓಡಿಸಬೇಕೆಂದು ಒಂದುವೇಳೆ ಯೋಚಿಸುತ್ತಲೇ ಇದ್ದರೆ... ಸಮಯವೂ ಸಹ ವ್ಯರ್ಥ, ಪರಿಶ್ರಮವೂ ಸಹ ವ್ಯರ್ಥವಾಗುತ್ತದೆ. ಇಂತಹ ಪರಿಶ್ರಮವನ್ನು ಪಡಬೇಡಿ. ಇಂದು ಕೋಪ ಬಂದಿತು ಇಂದು ಲೋಭ ಬಂದಿತು. ಇಂದು ವ್ಯರ್ಥ ಕೇಳಿಬಿಟ್ಟೆ, ಮಾತನಾಡಿದ್ದೆ. ಇಂದು ವ್ಯರ್ಥ ಆಗಿಬಿಟ್ಟಿದೆ ಇದನ್ನು ಯೋಚಿಸುತ್ತಾ-ಯೋಚಿಸುತ್ತಾ, ಪರಿಶ್ರಮ ಪಡುತ್ತಾ ಹೃದಯವಿಧೀರ್ಣರಾಗುತ್ತಾರೆ ಅರ್ಥಾತ್ ಬಲಹೀನರಾಗುವುದು. ಆದರೆ ಸಫಲ ಮಾಡಿಕೊಳ್ಳಬೇಕು . ಈ ಲಕ್ಷ್ಯದಿಂದ ವ್ಯರ್ಥ ಸ್ವತಃವಾಗಿಯೇ ಸಮಾಪ್ತಿಯಾಗಿಬಿಡುತ್ತದೆ. ಈ ಸಫಲತೆಯ ಲಕ್ಷ್ಯ ಇಡುವುದು ಅರ್ಥಾಥ್ ಬೆಳಕಿನಲ್ಲಿ ಬರುವುದೆಂದು ತಿಳಿಯಿರಿ. ಅಂದಮೇಲೆ ಅಂಧಕಾರ ಸ್ವತಃವಾಗಿಯೇ ಸಮಾಪ್ತಿಯಾಗಿಬಿಡುತ್ತದೆ. ತಿಳಿಯಿತೆ!!, ಅವ್ಯಕ್ತವರ್ಷದಲ್ಲಿ ಏನು ಮಾಡುತ್ತೀರಿ? ಬಾಪ್‌ದಾದಾರವರಿಗೆ ನಂಬರ್‌ವನ್ ಪ್ರಿಯರಾಗುತ್ತೀರೋ ಅಥವಾ ನಂಬರ್‌ವಾರ್ ಪ್ರಿಯರಾಗುತ್ತೀರೋ. ಎಲ್ಲರೂ ನಂಬರ್‌ವನ್ ಆಗುತ್ತೀರಾ? ಡಬಲ್ ವಿದೇಶಿಯರು ಏನು ಮಾಡುತ್ತೀರಿ? ನಂಬರ್‌ವನ್ ಆಗುತ್ತೀರಾ? ನಂಬರ್‌ವನ್ ಎಂದು ಹೇಳುವುದು ಬಹಳ ಸಹಜವಾಗಿದೆ. ಆದರೆ ದೃಢವಾಗಿದ್ದರೆ ಲಕ್ಷ್ಯ ಖಂಡಿತ ಬರುತ್ತದೆ. ಲಕ್ಷ್ಯ ಲಕ್ಷಣಗಳನ್ನು ಎಳೆಯುತ್ತದೆ. ಈಗ ಪರಸ್ಪರದಲ್ಲಿ ಪ್ಲಾನ್ ಮಾಡಬೇಕು, ಯೋಚನೆ ಮಾಡಬೇಕು. ಬಾಪ್ ದಾದಾರವರು ಖುಷಿಯಾಗಿದ್ದಾರೆ. ಒಂದುವೇಳೆ ಎಲ್ಲರೂ ನಂಬರ್‌ವನ್ ಆಗಿಬಿಟ್ಟರೆ ಬಹಳ ಖುಷಿಯಾಗುತ್ತಾರೆ. ಮೊದಲನೆಯ ವಿಭಾಗದಲ್ಲಿ ಎಲ್ಲರೂ ಮೊದಲನೆಯವರೇ ಇರುತ್ತಾರೆ. ಅಂದಾಗ ಎಲ್ಲರೂ ನಂಬರ್‌ವನ್ ಆಗಿ ಎಂದು

ಹೊಸ ವರ್ಷದ ಶುಭಾಶಯಗಳು. ವ್ಯರ್ಥದ ಮೇಲೆ ವಿಜಯ (ವಿನ್) ಆಗಿದ್ದರೆ ವನ್ (ಮೊದಲನೆಯ ನಂಬರ್) ಬರುತ್ತದೆ. ವ್ಯರ್ಥದ ಮೇಲೆ ವಿಜಯಿ ಆಗಲಿಲ್ಲವೆಂದರೆ ಮೊದಲನೆಯ ನಂಬರಿನಲ್ಲಿ ಬರುವುದಿಲ್ಲ. ಕೆಲವರ ಸಂಕಲ್ಪದಲ್ಲಿ, ಮಾತಿನಲ್ಲಿ. ಸಂಬಂಧ-ಸಂಪರ್ಕದಲ್ಲಿ ವ್ಯರ್ಥದ ಖಾತೆಯಿದೆ. ಈಗ ಪೂರ್ತಿ ಖಾತೆ ಸಮಾಪ್ತಿಯಾಗಿಲ್ಲ. ಆದ್ದರಿಂದ ಆಗಾಗ ಹೊರಬರುತ್ತದೆ. ಆದರೆ ಲಕ್ಷ್ಯ ತಮ್ಮ ಗುರಿಯನ್ನು ಅವಶ್ಯವಾಗಿ ಪ್ರಾಪ್ತಿ ಮಾಡಿಸುತ್ತದೆ. ವ್ಯರ್ಥಕ್ಕೆ ನಿಲ್ಲು (ಸ್ಟಾಪ್) ಎಂದು ಹೇಳಿದ ತಕ್ಷಣ ನಿಲ್ಲ (ಸ್ಟಾಪ್)ಬೇಕು. ಯಾವಾಗ ನಿಲ್ಲಿಸುವ ಶಕ್ತಿ ಬರುತ್ತದೋ ಆಗ ಹಳೆಯ ಖಾತೆಯು ಸಮಾಪ್ತಿಯಾಗಿಬಿಡುತ್ತದೆ. ಇಷ್ಟು ಶಕ್ತಿಯಿದೆಯೇ? ಪರಮಾತ್ಮನ ಸಿದ್ಧಿಯಾಗಿದೆ. ರಿದ್ಧಿ-ಸಿದ್ಧಿಯವರು ಅಲ್ಪಕಾಲದ ಚಮತ್ಕಾರವನ್ನು ತೋರಿಸುತ್ತಾರೆ ಮತ್ತು ಪರಮಾತ್ಮನ ಸಿದ್ಧಿಯವರು ವಿಧಿಯ ಮುಖಾಂತರ ಸಿದ್ಧಿಯನ್ನು ಪ್ರಾಪ್ತಿ ಮಾಡಿಸುವವರು. ಪರಮಾತ್ಮನ ಸಿದ್ಧಿ ಏನು ಮಾಡಲು ಸಾಧ್ಯವಿಲ್ಲ! ನಿಲ್ಲು (ಸ್ಟಾಪ್) ಎಂದು ಯೋಚನೆ ಮಾಡಿದ ತಕ್ಷಣ ನಿಲ್ಲಬೇಕು. ಇಷ್ಟು ಶಕ್ತಿಯಿದೆಯೇ? ಅಥವಾ ನಿಲ್ಲು (ಸ್ಟಾಪ್) ಎಂದು ಹೇಳಿದರೂ ಸಹ ಒಂದೆರಡು ದಿನ, 10 ಗಂಟೆ ಹಿಡಿಸುತ್ತದೇನು? ನಿಲ್ಲು ಅಂದಮೇಲೆ ತಕ್ಷಣ ನಿಲ್ಲಬೇಕು. ಅಂದಾಗ ಇದೇ ಫಲಿತಾಂಶವನ್ನು ತಂದೆಗೆ ಕೊಡಬೇಕು. ತಿಳಿಯಿತೇ?

ಸೇವೆಯ ಸಫಲತೆ ಅಥವಾ ಪ್ರತ್ಯಕ್ಷತೆಯಂತೂ ಡ್ರಾಮಾನುಸಾರ ವೃದ್ಧಿಯಾಗುತ್ತಾ ಹೋಗುತ್ತದೆ. ಈಗ ವೃದ್ಧಿ ಆಗುತ್ತಿದೆಯಲ್ಲವೇ. ಮೊದಲು ನೀವು ನಿಮಂತ್ರಣ ನೀಡುತ್ತಿದ್ದಿರಿ. ಈಗ ಅವರು ನಿಮಗೆ ನಿಮಂತ್ರಣ ನೀಡುತ್ತಿದ್ದಾರೆ. ಆದ್ದರಿಂದ ಸೇವೆಯ ಸಫಲತೆಯ ಪ್ರತ್ಯಕ್ಷತೆ ಆಗುತ್ತಿದೆಯಲ್ಲವೇ. ನಿಮಗೆ ಯಾವುದೇ ರಂಗಮಂಚ ಸಿಗುವುದಾಗಲಿ ಅಥವಾ ಡಿಗ್ರಿ ಸಿಗುವುದರ ಅವಶ್ಯಕತೆಯಿಲ್ಲ, ಆದರೆ ಇದು ಸೇವೆಯ ಪ್ರತ್ಯಕ್ಷತೆಯಾಗಿದೆ. ಭಗವಂತನ ಡಿಗ್ರಿಯ ಮುಂದೆ ಈ ಡಿಗ್ರಿಯೂ ಏನಾಗಿದೆ? (ಉದಯಪುರದ ವಿಶ್ವವಿದ್ಯಾಲಯವು ದಾದಿಜಿಯವರಿಗೆ ಡಾಕ್ಟರೇಟ್ ಪದವಿಯನ್ನು ನೀಡಿದೆ) ಇದೂ ಸಹ ಪ್ರತ್ಯಕ್ಷತೆಯ ಸಾಧನವಾಗಿದೆ. ಸಾಧನಗಳ ಮೂಲಕ ಸೇವೆಯ ಪ್ರತ್ಯಕ್ಷತೆಯಾಗುತ್ತಿದೆ. ಮಾಡಿ ಮಾಡಿಸಲ್ಪಟ್ಟಂತಹ ರಂಗಮಂಚ (ಸ್ಟೇಜ್) ಸಿಗಲೆ ಬೇಕು. ಈ ಧರ್ಮನೇತಗಳೆಲ್ಲಾ ತಮಗೆ ಆಮಂತ್ರಣ ಕೊಟ್ಟು ಮುಖ್ಯ ಅತಿಥಿಯನ್ನಾಗಿ ತಮ್ಮನ್ನೇ ಮಾಡುತ್ತಾರೆ ಅಂತಹ ಒಂದುದಿನ ಬರಲೇಬೇಕು. ಈಗ ಸ್ವಲ್ಪ ಬಾಹ್ಯ ರೂಪರೇಖೆಯಲ್ಲಿ ಇಡಬೇಕಾಗುತ್ತದೆ, ಆದರೆ ಈ ಪವಿತ್ರ ಆತ್ಮರಿಗೆ ಸ್ಥಾನ ಸಿಗಲೇಬೇಕೆಂದು ಒಳಗೆ ಅವರಿಗೆ ಅನುಭೂತಿಯಾಗುತ್ತದೆ. ರಾಜನೇತರಂತೂ ಹೇಳಿಯೇಬಿಡುತ್ತಾರೆ - ನಮ್ಮನ್ನು ನೀವು ಮುಖ್ಯ ಅತಿಥಿಯನ್ನಾಗಿ ಮಾಡುತ್ತೀರಿ, ನೀವೇ ಆದರೆ ಒಳ್ಳೆಯದು. ಆದರೆ ಡ್ರಾಮಾದಲ್ಲಿ ಹೆಸರು ಅವರದು, ಕೆಲಸ ನಿಮ್ಮದಾಗಿರುತ್ತದೆ.

ಹೇಗೆ ಸೇವೆಯಲ್ಲಿ ಪ್ರತ್ಯಕ್ಷತೆಯಾಗುತ್ತಾ ಇರುತ್ತದೆ, ವಿಧಿ ಬದಲಾವಣೆಯಾಗುತ್ತಾ ಹೋಗುತ್ತದೆಯೋ ಹಾಗೆಯೇ ಪ್ರತಿಯೊಬ್ಬರು ತಮ್ಮಲ್ಲಿ ಸಂಪೂರ್ಣತೆ ಹಾಗೂ ಸಂಪನ್ನತೆಯ ಪ್ರತ್ಯಕ್ಷತೆಯನ್ನು ಮಾಡಿ. ಈಗ ಇದರ ಅವಶ್ಯಕತೆಯಿದೆ ಹಾಗೂ ಅವಶ್ಯವಾಗಿ ಸಂಪನ್ನ ಆಗಲೇಬೇಕು. ಕಲ್ಪ-ಕಲ್ಪದ ನಿಮ್ಮ ಚಿಹ್ನೆ ಸಫಲತೆಯಾಗಿಯೇ ಹೋಗಿದೆ ಎಂಬುದನ್ನು ಸಿದ್ಧ ಮಾಡುತ್ತದೆ. ಈ ವಿಜಯಮಾಲೆ ಏನಾಗಿದೆ? ವಿಜಯಿಗಳಾಗಿಯೇ ಇದ್ದೀರಿ. ಸಫಲತಾಮೂರ್ತಿಗಳಾಗಿದ್ದೀರಿ. ಆದ್ದರಿಂದಲೇ ಇದರ ಚಿಹ್ನೆಯಿದೆಯಲ್ಲವೇ ಇದನ್ನು ನಿಲ್ಲಿಸಲು ಸಾಧ್ಯವಿಲ್ಲ. ಈಗಂತೂ

ತಯಾರಾಗಿಲ್ಲ. ಈಗಂತೂ ಏರುಪೇರು ನಡೆಯುತ್ತಿದೆ ಎಂದು ಎಷ್ಟು ಯೋಚನೆ ಮಾಡಿದರೂ ಸಹ ಇದರಲ್ಲಿ ಹೆದರಿಕೊಳ್ಳುವ ಅವಶ್ಯಕತೆ ಇಲ್ಲ. ಕಲ್ಪ-ಕಲ್ಪದ ಸಫಲತೆಯ ಗ್ಯಾರೆಂಟಿಯೇ ಈ ಸ್ಮೃತಿಚಿಹ್ನೆಯಾಗಿದೆ. 'ಏನಾಗುತ್ತದೆಯೋ' 'ಹೇಗಾಗುತ್ತದೆಯೋ' ಈ ಪ್ರಶ್ನೆಗಳ ಅವಶ್ಯಕತೆಯಿಲ್ಲ. ಆಗಲೇಬೇಕು ಇದು ನಿಶ್ಚಿತವಾಗಿದೆಯಲ್ಲವೆ, ನಿಶ್ಚಿತವಾಗಿ ಆಗುವುದನ್ನು ಯಾರೂ ಅಲುಗಾಡಿಸಲು ಸಾಧ್ಯವಿಲ್ಲ. ಒಂದುವೇಳೆ ದೋಣಿ ಹಾಗೂ ಅಂಬಿಗ ಇಬ್ಬರೂ ಶಕ್ತಿಶಾಲಿಯಾಗಿದ್ದರೆ ಯಾವುದೇ ಬಿರುಗಾಳಿಯು ಮುಂದೆ ತೆಗೆದುಕೊಂಡು ಹೋಗಲು ಸಾಧನವಾಗಿಬಿಡುತ್ತದೆ. ಬಿರುಗಾಳಿಯೂ ಸಹ ಉಡುಗೊರೆಯಾಗುತ್ತದೆ. ಆದ್ದರಿಂದ ಮಧ್ಯ-ಮಧ್ಯ ಚಿಕ್ಕ-ಚಿಕ್ಕ ಸನ್ನಿವೇಶಗಳು ಸಂಭವಿಸುತ್ತದೆ. ಅಟಲವಾದ ಪೂರ್ವ ನಿಶ್ಚಿತವಾಗಿದೆ. ಇಷ್ಟು ನಿಶ್ಚಯವಿದೆಯೇ? ಅಥವಾ ಸ್ವಲ್ಪ ಆಗಾಗ ಮೇಲೆ ಕೆಳಗೆ ನೋಡುತ್ತಾ ಹೆದರಿಬಿಡುತ್ತೀರಾ... ಯಾವಾಗ ಏನಾಗುತ್ತದೆಯೋ ಗೊತ್ತಿಲ್ಲ ಎಂಬ ಪ್ರಶ್ನೆ ಬರುತ್ತದೆಯೇ? ಈ ಬಿರುಗಾಳಿಯೇ ಉಡುಗೊರೆಯಾಗುತ್ತದೆ. ತಿಳಿಯಿತೇ? ಇದಕ್ಕೆ ನಿಶ್ಚಯಬುದ್ಧಿ ವಿಜಯಂತಿ ಎಂದು ಹೇಳಲಾಗುತ್ತದೆ. ಕೇವಲ ತಂದೆಯನ್ನು ಅನುಸರಿಸಿರಿ. ಒಳ್ಳೆಯದು.

**ಸರ್ವ ಅಟಲ ನಿಶ್ಚಯಬುದ್ಧಿ ವಿಜಯಿ ಆತ್ಮರಿಗೆ, ಸದಾ ಪ್ರತಿ ಖಜಾನೆಯನ್ನು ಸಫಲ ಮಾಡುವಂತಹ ಸಫಲತಾಮೂರ್ತಿ ಅತ್ಮರಿಗೆ ಸದಾ ಬ್ರಹ್ಮಾ ತಂದೆಯನ್ನು ಪ್ರತಿಯೊಂದು ಹೆಜ್ಜೆಯಲ್ಲಿ ಸಹಜವಾಗಿ ಅನುಸರಿಸುವವರಿಗೆ, ಸದಾ ಹೊಸ ಜೀವನ ಹಾಗೂ ನವಯುಗದ ಸ್ಮೃತಿಯಲ್ಲಿ ಇರುವಂತಹ ಸಮರ್ಥ ಅತ್ಮರಿಗೆ,  ಸದಾ ತಮ್ಮಲ್ಲಿ ತಂದೆಯ ಸ್ನೇಹದ ಗುರುತನ್ನು ಪ್ರತ್ಯಕ್ಷ ಮಾಡುವಂತಹ ವಿಶೇಷ ಆತ್ಮರಿಗೆ, ಶ್ರೇಷ್ಠ ಪರಿವರ್ತನೆಯ ಅವ್ಯಕ್ತ ವರ್ಷದ ಶುಭಾಷಯಗಳು, ಪ್ರಿಯಸ್ಮೃತಿಗಳು ಹಾಗೂ ನಮಸ್ತೆ.**

**ದಾದೀಜಿಯವರ ಜೊತೆ ಭೇಟಿ:**

ಡ್ರಾಮಾದ ದೃಶ್ಯವನ್ನು ನೋಡಿ ಹರ್ಷಿತವಾಗುತ್ತಿದ್ದೀರಲ್ಲವೇ "ವಾಹ್ ಡ್ರಾಮಾ ವಾಹ್" "ವಾಹ್ ಬಾಬಾ ವಾಹ್". ಇದೇ ಗೀತೆ ಅನಾದಿ, ಅವಿನಾಶಿಯಾಗಿ ನಡೆಯುತ್ತಿರುತ್ತದೆ. ಮಕ್ಕಳು ತಂದೆಯನ್ನು ಪ್ರತ್ಯಕ್ಷ  ಮಾಡುತ್ತಾರೆ ಮತ್ತು ತಂದೆ ಶಕ್ತಿ ಸೇನೆಯನ್ನು ಪ್ರತ್ಯಕ್ಷ ಮಾಡುತ್ತಾರೆ. ಒಳ್ಳೆಯ ಸೇವೆಯಾಯಿತು.ಹೊಸ ರೂಪ ರೇಖೆಯಂತು ಆಗಲೇಬೇಕು. ಇದೇ ರೀತಿ ಎಲ್ಲರ ಮುಖದಿಂದ "ಬಾಬಾ, ಬಾಬಾ" ಶಬ್ದ ಬರುತ್ತಿರಲಿ ಏಕೆಂದರೆ ವಿಶ್ವಪಿತರಾಗಿದ್ದಾರೆ. ಅಂದಮೇಲೆ ಬ್ರಾಹ್ಮಣ ಆತ್ಮರ ಹೃದಯದಿಂದ, ಮುಖದಿಂದ 'ಬಾಬಾ' ಎನ್ನುವುದು ಬಂದೆ ಬರುತ್ತದೆ. ಆದರೆ ಸರ್ವ ಆತ್ಮರ ಹೃದಯದಿಂದ ಅಥವಾ ಮುಖದಿಂದ 'ಬಾಬಾ' ಎನ್ನುವುದು ಬರಬೇಕು ಆಗಲೇ ಸಮಾಪ್ತಿಯಾಗುತ್ತದೆ.'ಅಹೋ ಪ್ರಭು' ಎಂದಾದರೂ ಬರಲಿ, ಅಥವಾ ವಾಹ್ ಬಾಬಾ' ಎನ್ನುವ ರೂಪದಲ್ಲಾದರೂ ಬರಲಿ ಆದರೆ ಬಾಬಾ ಶಬ್ಧದ ಪರಿಚಯ ಸಿಗಲೇ ಬೇಕು. ಹಾಗಾದರೆ ಇದೇ ಸೇವೆಯ ಸಾಧನೆಯ ಅನುಭವ ಮಾಡಿದರು- ಒಂದು ಮೈಕ್ ಎಷ್ಟು ಸೇವೆಯನ್ನು ಮಾಡಬಹುದು. ಸಂದೇಶ ಕೊಡುವ ಕಾರ್ಯವಂತೂ ಆಗುತ್ತದೆ. ಹಾಗಾದರೆ ಈಗ ಮೈಕ್ ಅನ್ನು ತಯಾರಿ ಮಾಡಬೇಕಾಗಿದೆ. ಇಲ್ಲಿನ (ರಾಜಸ್ಥಾನರಾದ ರಾಜ್ಯಪಾಲರಾದ ಡಾ॥ ಎಮ್. ಚನ್ನಾ ರೆಡ್ಡಿ) ಸಂಘ( ಮಾದರಿಯಾಗಿದ್ದಾರೆ) ಆಗಿದ್ದಾರೆ. ಆದರೂ ಸಹ

ಮೈಕ್ ಅನ್ನು ತಯಾರು ಮಡುವುದರಲ್ಲಿ ನಂಬರನ್ನು ತೆಗೆದುಕೊಂಡಿದೆ. ಈಗ ಈ ರೀತಿ ತಯಾರು ಮಾಡಬೇಕು. ರಾಜಸ್ಥಾನದ ಮೈಕನ್ನು ಆಬುರವರು ತಯಾರು ಮಾಡಿದ್ದಾರೆ. ರಾಜಸ್ಥಾನದವರಲ್ಲ. ಬಾಣವಂತು ಆಬುವಿನಿಂದ ಹೊರಟಿತು(ಪ್ರಭಾವ ಬೀರಿತು). ಒಳ್ಳೆಯದು. ಓಂ ಶಾಂತಿ.

ರಿವೈಸ್ ಕೋರ್ಸ್ 31-12-1992.

***ಸಫಲತೆಯನ್ನು ಪ್ರಾಪ್ತಿ ಮಾಡಿಕೊಳ್ಳಲು ಸಹಜ ಸಾಧನ ಎಲ್ಲವನ್ನು ಸಫಲ ಮಾಡಿಕೊಳ್ಳುವುದಾಗಿದೆ***

ಸಫಲ ಮಾಡಿಕೊಳ್ಳುವುದು ಅರ್ಥಾಥ್ ವರ್ತಮಾನಕ್ಕಾಗಿ ಸಫಲತೆ ಮತ್ತು ಭವಿಷ್ಯಕ್ಕಾಗಿ ಜಮಾ ಮಾಡಿಕೊಳ್ಳುವುದು. ಎಷ್ಟು ಈ ಜೀವನದಲ್ಲಿ ಸಮಯವನ್ನು ಸಫಲ ಮಾಡಿಕೊಳ್ಳುತ್ತೀರೋ ಅದರ ಫಲಸ್ವರೂಪವಾಗಿ ರಾಜ್ಯ ಭಾಗ್ಯದ ಸಂಪೂರ್ಣ ಸಮಯ ರಾಜ್ಯಾಧಿಕಾರಿಗಳಾಗುತ್ತಿರಿ. ಪ್ರತಿಯೊಂದು ಶ್ವಾಸವನ್ನು ಸಫಲ ಮಾಡಿಕೊಂಡರೆ ಅನೇಕ ಜನ್ಮ ಸದಾ ಆರೋಗ್ಯವಂತರಾಗಿರುತ್ತೀರಿ. ನಡೆಯುತ್ತಾ ನಡೆಯುತ್ತಾ ಶ್ವಾಸ ನಿಂತು ಹೋಗುವುದಿಲ್ಲ. ಹಾರ್ಟ್ ಫೇಲಾಗುವುದಿಲ್ಲ. ಒಂದು ಗುಣಕ್ಕೆ ಸಾವಿರ ಗುಣ ಸಫಲತೆಯ ಅಧಿಕಾರ ಪ್ರಾಪ್ತಿ ಮಾಡಿಕೊಳ್ಳುತ್ತೀರಿ. ಸರ್ವಖಜಾನೆಯನ್ನು ಸಫಲ ಮಾಡಿಕೊಂಡರೆ ಇದರಲ್ಲೂ ಸಹ ವಿಶೇಷವಾಗಿ ಜ್ಞಾನದ ಖಜಾನೆಯನ್ನು ಸಫಲ ಮಾಡಿಕೊಂಡಾಗ ಭವಿಷ್ಯದಲ್ಲಿ ಅನೇಕ ಮಂತ್ರಿಗಳಿಂದ ಸಲಹೆಯನ್ನು ತೆಗೆದುಕೊಳ್ಳುವ ಅವಶ್ಯಕತೆ ಬರುವುದಿಲ್ಲ. ಅಂತಹ ತಿಳುವಳಿಕೆಯುಳ್ಳವರಾಗುತ್ತೀರಿ. ಎಷ್ಟು  ಸರ್ವಶಕ್ತಿಗಳ ಖಜಾನೆಯನ್ನು ಸಫಲ ಮಾಡಿಕೊಂಡರೆ ಅಷ್ಟು ತಮ್ಮ ಭವಿಷ್ಯ ರಾಜ್ಯದಲ್ಲಿ ಯಾವುದೇ ಶಕ್ತಿಯ ಕೊರತೆ ಇರುವುದಿಲ್ಲ. ಸರ್ವಶಕ್ತಿಗಳು ಸ್ವತಹವಾಗಿಯೇ ಅಖಂಡ, ಅಟಲ, ನಿರ್ವಿಘ್ನ ಕಾರ್ಯದಲ್ಲಿ ಸಫಲತೆಯ ಅನುಭೂತಿಯನ್ನು ಮಾಡಿಸುತ್ತದೆ. ಯಾವುದೇ ಶಕ್ತಿಯ ಕೊರತೆ ಇರುವುದಿಲ್ಲ. ಧರ್ಮ ಶಕ್ತಿ ಮತ್ತು ರಾಜ್ಯ ಶಕ್ತಿ ಎರಡು ಒಟ್ಟಿಗೆ ನಡೆಯುತ್ತವೆ. ಸರ್ವ ಗುಣಗಳನ್ನು ಸಫಲ ಮಾಡಿಕೊಂಡರೆ ಕೊನೆಯ ಸಮಯದಲ್ಲೂ ಸಹ ನಿಮ್ಮ ಜಡಚಿತ್ರಗಳ ಮಹಿಮೆ ಸರ್ವ ಗುಣ ಸಂಪನ್ನ ದೇವತಾ ರೂಪದಲ್ಲಿ ಆಗುತ್ತದೆ. ಇಂತಹ ಗುಣಮೂರ್ತಿಗಳಾಗುತ್ತಿರಿ. ಎಂದು ತಿಳಿಸುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿತ್ತು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಜ್ಞಾನ ಸ್ವರೂಪ, ಶಿವ ಪರಮಾತ್ಮನ ತಂದೆ.

1. ನನಗೆ ತಂದೆ ಜನ್ಮಜನ್ಮಗಳಿಗಾಗಿ ಅರ್ಥಾತ್ ಅನೇಕ ಜನ್ಮಗಳಿಗೆ ವಿಶ್ವರಾಜ್ಯ ಭಾಗ್ಯವನ್ನು ಹೊಸ ಯುಗದ ಸುವರ್ಣ ಉಡುಗೊರೆಯನ್ನು ಕೊಟ್ಟಿದ್ದಾರೆ.

2. ನಾನು ವಿಶ್ವರಾಜ್ಯ ಭಾಗ್ಯ ನನ್ನ ಜನ್ಮ ಸಿದ್ಧ ಅಧಿಕಾರ ಎಂಬ ನಿಶ್ಚಯ ಮತ್ತು ನಶೆಯಿಂದ ಇದ್ದೇನೆ.

3. ಬ್ರಾಹ್ಮಣರಿಂದ ಸೂಕ್ಷ್ಮ ದೇವತೆ (ಫರಿಶ್ತಾ), ಸೂಕ್ಷ್ಮ ದೇವತೆಯಿಂದ ದೇವತೆ ಈ ಸುವರ್ಣ ಉಡುಗೊರೆಯನ್ನು ತಂದೆ ನನಗೆ ಕೊಟ್ಟಿದ್ದಾರೆ. ನಾನು ಇತರರಿಗೆ ಕೊಟ್ಟಿದ್ದೇನೆ.

4. ನಾನು ಸಂಗಮ ಯುಗದಲ್ಲಿ ಪ್ರತಿಯೊಂದು ದಿನ ಮಜಾದಿಂದ, ಖುಷಿಯ ಉಯ್ಯಾಲೆಯಲ್ಲಿ ತೂಗುತ್ತಾ, ಖುಷಿಯಿಂದ ನಾಟ್ಯ ಮಾಡುತ್ತಾ, ಅವಿನಾಶಿ ಹಾಡುಗಳನ್ನು ಹಾಡುತ್ತಾ, ಉತ್ಸಾಹ ಉಲ್ಲಾಸಗಳನ್ನು ಬೆಳೆಸಿಕೊಳ್ಳುವ ಉತ್ಸವನ್ನು ಆಚರಿಸಿಕೊಂಡಿದ್ದೇನೆ.

5. ನಾನು ಪ್ರತಿಯೊಂದು ಕ್ಷಣ, ಪ್ರತಿಯೊಂದು ಶ್ವಾಸ, ಪ್ರತಿಯೊಂದು ಖಜಾನೆ ಯನ್ನು ಸಫಲ ಮಾಡಿಕೊಂಡು ಇತರರ ಪ್ರತಿ ಸಫಲ ಮಾಡಿ ಸ್ವತಹವಾಗಿ ಸಂತೋಷವನ್ನು ಅನುಭವ ಮಾಡಿಕೊಂಡಿದ್ದೇನೆ.(ಕರ್ಮ ಫಿಲಾಸಫಿ)

6. ನಾನು ವರ್ತಮಾನದಲ್ಲಿ ಖಜಾನೆಗಳನ್ನು ಸಫಲ ಮಾಡಿಕೊಂಡು ಭವಿಷ್ಯಕ್ಕಾಗಿ ಜಮಾ ಮಾಡಿಕೊಂಡಿದ್ದೇನೆ.(ಕರ್ಮ ಫಿಲಾಸಫಿ)

7. ನಾನು ಈ ಜೀವನದಲ್ಲಿ ಸಮಯವನ್ನು ಸಫಲ ಮಾಡಿಕೊಂಡು ಪೂರ್ಣ ಸಮಯಕ್ಕೆ ರಾಜ್ಯಾಧಿಕಾರಿಯಾಗಿದ್ದೇನೆ. (ಕರ್ಮ ಫಿಲಾಸಫಿ)

8. ನಾನು ಶ್ವಾಸವನ್ನು ಸಫಲ ಮಾಡಿಕೊಂಡು ಅನೇಕ ಜನ್ಮಗಳು ಸದಾ ಆರೋಗ್ಯವಾಗಿದ್ದೇನೆ .(ಕರ್ಮ ಫಿಲಾಸಫಿ)

9. ನಾನು ಜ್ಞಾನ ಖಜಾನೆಯನ್ನು ಸಫಲ ಮಾಡಿಕೊಂಡು ಅದರ ಫಲಸ್ವರೂಪವಾಗಿ ತಿಳುವಳಿಕೆಯುಳ್ಳವರಾಗಿ ಅರ್ಥಾತ್ ಭವಿಷ್ಯದಲ್ಲಿ ಮಂತ್ರಿಗಳ ಸಲಹೆಯನ್ನು ಪಡೆಯುವ ಅವಶ್ಯಕತೆಯಿಲ್ಲದೇ ಸ್ವಯಂ ತಿಳುವಳಿಕೆಯಿಂದ ರಾಜ್ಯವನ್ನು ನಡೆಸಿದ್ದೇನೆ.(ಕರ್ಮ ಫಿಲಾಸಫಿ)

10. ನಾನು ಸರ್ವಶಕ್ತಿಯ ಖಜಾನೆಯನ್ನು ಸಫಲ ಮಾಡಿಕೊಂಡ ಫಲಸ್ವರೂಪವಾಗಿ ಭವಿಷ್ಯ ರಾಜ್ಯದಲ್ಲಿ ಯಾವ ಶಕ್ತಿಯ ಲೋಪವಿಲ್ಲದೇ ಸರ್ವಶಕ್ತಿಗಳು ಅಖಂಡವಾಗಿ, ನಿರ್ವಿಘ್ನವಾಗಿ ಕಾರ್ಯದ ಸಫಲತೆಯನ್ನು ಅನುಭವ ಮಾಡಿಸಿದವು ಹಾಗೂ ರಾಜ್ಯ ಶಕ್ತಿ & ಧರ್ಮ ಶಕ್ತಿ ಎರಡು ಜೊತೆಜೊತೆಗೆ ಇವೆ.(ಕರ್ಮ ಫಿಲಾಸಫಿ)

11. ನಾನು ಸರ್ವ ಗುಣಗಳ ಖಜಾನೆಯನ್ನು ಸಫಲ ಮಾಡಿಕೊಂಡು ಅದರ ಫಲಸ್ವರೂಪವಾಗಿ ಅಂತಿಮ ಸಮಯದಲ್ಲಿ ಕೂಡ ನನ್ನ ಜಡ ಚಿತ್ರಗಳು "ಸರ್ವಗುಣ ಸಂಪನ್ನ ದೇವತೆಗಳು" ಎಂಬ ಮಹಿಮೆಯನ್ನು ಪಡೆಯುತ್ತಿವೆ. (ಕರ್ಮ ಫಿಲಾಸಫಿ)

12. ಬ್ರಹ್ಮಾ ತಂದೆಯ ಮೇಲೆ ಪ್ರೀತಿಗೆ ಗುರುತಾಗಿ ನಾನು ತಂದೆಯ ಸಮಾನವಾಗಿ ತಯಾರಾಗಿದ್ದೇನೆ.

13. ನಾನು ಯಾವ ಕರ್ಮವನ್ನು ಮಾಡುತ್ತಿದ್ದರೂ ಕರ್ಮ ಮಾಡುವ ಮೊದಲು, ಮಾತನಾಡುವ ಮೊದಲು, ಸಂಕಲ್ಪ ಮಾಡುವ ಮೊದಲು ಇದು ಬ್ರಹ್ಮಾ ತಂದೆಯ ಸಮಾನವಾಗಿದೆಯೇ? ಎಂದು ಪರಿಶೀಲಿಸಿಕೊಂಡು ನಂತರ ಪ್ರತ್ಯಕ್ಷದಲ್ಲಿ ತಂದಿದ್ದೇನೆ.

14. ನಾನು ಸಫಲ ಮಾಡಿಕೊಳ್ಳಬೇಕು ಎಂಬ ಲಕ್ಷ್ಯವನ್ನು ಇಟ್ಟುಕೊಂಡು ಸ್ವತಹವಾಗಿ ವ್ಯರ್ಥವನ್ನು ಸಮಾಪ್ತಿ ಮಾಡಿದ್ದೇನೆ.

15. ನಾನು ವ್ಯರ್ಥದ ಮೇಲೆ ವಿಜಯವನ್ನು ಪಡೆದು ನಂಬರ್ ವನ್ ಆಗಿದ್ದೇನೆ.

16. ನಾನು ಸ್ವಯಂನಲ್ಲಿ ಸಂಪೂರ್ಣತೆ ಮತ್ತು ಸಂಪನ್ನತೆಯನ್ನು ಪ್ರತ್ಯಕ್ಷ ಮಾಡಿದ್ದೇನೆ.